# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 07.05.2016.

ಸಂಖ್ಯೆ:ಆ/ಪಿಆರ್/ 31 /2016-17

## :: ಸಾರ್ವಜನಿಕ ಪ್ರಕಟಣೆ ::

ವಿಷಯಃ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ / ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡಿರುವುದನ್ನು ಕೂಡಲೇ ತೆರವುಗೊಳಿಸುವ ಬಗ್ಗೆ.

ಉಲ್ಲೇಖಃ ಘನ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ (ಡಬ್ಲ್ಯೂಪಿ) WP 13731/2013 ಪ್ರಕರಣದ ದಿನಾಂಕ: 24-02-2016ರ ಅಂತಿಮ ತೀರ್ಪಿನಂತೆ.

*****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಹಲವಾರು ರಸ್ತೆಗಳು, ಪಾದಚಾರಿ ಮಾರ್ಗಗಳು ಒತ್ತುವರಿಯಾಗಿರುವುದು ಕಂಡು ಬಂದಿರುತ್ತದೆ.

ರಸ್ತೆಗಳಲ್ಲಿ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಅಂಗಡಿ ಮಾಲೀಕರುಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡು ವ್ಯಾಪಾರ ಸಾಮಗ್ರಿಗಳನ್ನು ಇಟ್ಟು, ಒತ್ತುವರಿ ಮಾಡಿಕೊಂಡಿರುವುದು ಗಮನಿಸಿಲಾಗಿರುತ್ತದೆ. ಕೆಲವು ಪ್ರಕರಣಗಳಲ್ಲಿ ಅಂಗಡಿಗಳ ಮುಂದಿನ ಮೇಲ್ಚಾವಣೆಯನ್ನು ರಸ್ತೆಯ ಮೇಲೆಯೆ ನಿರ್ಮಿಸಿ, ಪಾದಚಾರಿಗಳ ಓಡಾಟಕ್ಕೆ ಅಡಚಣೆ ಉಂಟುಮಾಡುತ್ತಿರುತ್ತಾರೆ. ಕೆಲವು ಸಂದರ್ಭದಲ್ಲಿ ಪಾದಚಾರಿ ಮಾರ್ಗದ ಮೇಲೆ ವಸ್ತುಗಳನ್ನಿರಿಸಿ ವ್ಯಾಪಾರ ಮಾಡುತ್ತಿರುವುದು ಸಾಮಾನ್ಯವಾಗಿರುತ್ತದೆ.

ಪಾದಚಾರಿ ಮಾರ್ಗಗಳಲ್ಲಿ ಸಾರ್ವಜನಿಕರು ಸುರಕ್ಷತೆಯಿಂದ ಓಡಾಡಲು ಬಿಬಿಎಂಪಿ ಈಗಾಗಲೇ ಹಲವಾರು ಕಡೆ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಿದ್ದು ಹಾಗೂ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಂಡಿರುತ್ತದೆ. ಆದ್ಯಾಗ್ಯೂ ಸಾರ್ವಜನಿಕರ ಓಡಾಟಕ್ಕಿರುವ ಪಾದಚಾರಿ ಮಾರ್ಗಗಳನ್ನು ಈ ರೀತಿ ಅತಿಕ್ರಮಿಸಿಕೊಂಡಿರುವುದು ಅಪರಾಧವಾಗಿರುತ್ತದೆ. ಮುಂದುವರೆದು ರಸ್ತೆಗಳ ಮೇಲೂ ರಸ್ತೆಬದಿ ವ್ಯಾಪಾರಿಗಳು, ತಳ್ಳುವ ಗಾಡಿಗಳಲ್ಲಿ ವ್ಯಾಪಾರ/ವಹಿವಾಟು ಮಾಡುತ್ತಾ, ರಸ್ತೆಯಲ್ಲಿ ಓಡಾಡುವ ವಾಹನಗಳಿಗೆ ಅಡ್ಡಲಾಗಿ, ಸುಗಮ ಸಂಚಾರಕ್ಕೆ ಅಡ್ಡಿಪಡಿಸುತ್ತಿರುತ್ತಾರೆ. ಇದರಿಂದ ರಸ್ತೆ ಅಪಘಾತಗಳು ಸಂಭವಿಸುತ್ತಿರುತ್ತದೆ.

ಮುಂದುವರೆದು ರಸ್ತೆಗಳ ಮೇಲೆ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಸಾರ್ವಜನಿಕ ಓಡಾಟಕ್ಕೆ ಅನಾನುಕೂಲವಾಗುವಂತೆ ಮನೆ ನಿರ್ಮಾಣಕ್ಕೆ ಬಳಸುವಂತಹ ಇಟ್ಟಿಗೆ, ಮರಳು, ಕಬ್ಬಿಣದ ಸರಳುಗಳನ್ನು ಇರಿಸುವುದು ಹಾಗೂ ತೆರವುಗೊಳಿಸಿದ ಕಟ್ಟಡಗಳ ಭಗ್ನಾವಶೇಷಗಳನ್ನು ಸುರಿಯುವುದು ದಂಡಾನಾರ್ಹ ಅಪರಾಧವಾಗಿರುತ್ತದೆ.

ರಸ್ತೆಗಳ ಬದಿಯಲ್ಲಿ ಹಾಗೂ ಪಾದಚಾರಿ ಮಾರ್ಗಗಳಲ್ಲಿ ವಾಹನಗಳನ್ನು ಅನಧಿಕೃತವಾಗಿ ನಿಲುಗಡೆ ಮಾಡುವುದು ದಂಡಾನಾರ್ಹವಾಗಿರುತ್ತದೆ ಇಂತಹ ಪ್ರಕರಣಗಳಲ್ಲಿ ವಾಹನಗಳನ್ನು ದಂಡ ವಿಧಿಸಿ ತೆರವುಗೊಳಿಸಲಾಗುವುದು. ಕೆಲವೊಂದು ಸಂದರ್ಭಗಳಲ್ಲಿ ಈ ರೀತಿ ವಾಹನಗಳು ಹಲವಾರು ದಿನಗಳವರೆವಿಗೂ ನಿಲುಗಡೆಗೊಂಡಿರುತ್ತವೆ. ಈ ಕಾರಣಗಳಿಂದಾಗಿ ರಸ್ತೆಯಲ್ಲಿ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವುದು ಸಹ ಕಷ್ಟ ಸಾಧ್ಯವಾಗಿರುತ್ತದೆ.

...2)

ಈಗಾಗಲೇ ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಹಾಗೂ ಸುಸ್ಥಿತಿಯಲ್ಲಿಡಬೇಕಾದ ಬಗ್ಗೆ ಘನ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ (ಡಬ್ಲ್ಯೂಪಿ) WP 13731/2013 ಪ್ರಕರಣದಲ್ಲಿ ಘನ ಉಚ್ಚ ನ್ಯಾಯಾಲಯವು, **BBMP shall continue with the measures to keep the footpaths clean and free for the pedestrians** ಎಂದು ನಿರ್ದೇಶಿಸಿದೆ.

ಈ ಎಲ್ಲಾ ಮೇಲ್ಕಂಡ ಪ್ರಕರಣಗಳಲ್ಲಿ ಪಾದಚಾರಿ ಮಾರ್ಗ ಹಾಗೂ ರಸ್ತೆ ಒತ್ತುವರಿದಾರರಿಗೆ ಈ ಮೂಲಕ ಬಿಬಿಎಂಪಿ ಎಚ್ಚರಿಕೆಯನ್ನು ನೀಡಿದೆ. ಒತ್ತುವರಿಯನ್ನು ಸ್ವಯಂಪ್ರೇರಿತರಾಗಿ ಕೂಡಲೇ ತೆರವುಗೊಳಿಸದಿದ್ದಲ್ಲಿ ಬಿಬಿಎಂಪಿಯ ತಂಡಗಳು ದಂಡವನ್ನು ವಿಧಿಸಿ ತೆರವು ಕಾರ್ಯವನ್ನು ಕೈಗೊಳ್ಳಲಿದೆ ಹಾಗೂ ತೆರವುಗೊಳಿಸುವ ಸಂದರ್ಭದಲ್ಲಿ ಯಾವುದೇ ಹಾನಿ ಸಂಭವಿಸಿದಲ್ಲಿ ಪಾಲಿಕೆಯು ಜಬಾಬ್ದಾರಿಯಾಗಿರುವುದಿಲ್ಲ.

7/4/2016

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು

1. ಪೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಉಪ ಮಹಾಪೌರರು ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ವಿಶೇಷ ಆಯುಕ್ತರು (ಘ.ತ್ಯಾ.ನಿ)ರವರ ಮುಂದಿನ ಕ್ರಮಕ್ಕಾಗಿ
5. ಜಂಟಿ ಆಯುಕ್ತರು (ಘ.ತ್ಯಾ.ನಿ.) ರವರಿಗೆ ಮುಂದಿನ ಕ್ರಮಕ್ಕಾಗಿ.
6. ಪ್ರಧಾನ ಅಭಿಯಂತರರು/ಮುಖ್ಯ ಅಭಿಯಂತರರು (ಘ.ತ್ಯಾ.ನಿ.) ರವರ ಮುಂದಿನ ಅಗತ್ಯ ಕ್ರಮಕ್ಕಾಗಿ.
7. ವಲಯ ಅಪರ/ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು, ಅಧೀಕ್ಷಕ ಅಭಿಯಂತರರು, ವಾರ್ಡ್‌ವಾರು ತಾಂತ್ರಿಕ, ಕಂದಾಯ ಹಾಗೂ ಆರೋಗ್ಯ ಅಧಿಕಾರಿಗಳ ಮತ್ತು ಸಿಬ್ಬಂದಿಗಳನ್ನೊಳಗೊಂಡ ತಂಡಗಳನ್ನು ರಚಿಸಿ ತೆರವುಗೊಳಿಸಲು ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ. ಈ ಕಾರ್ಯದಲ್ಲಿ ನ್ಯೂನ್ಯತೆಗಳಾಗದಂತೆ ಕ್ರಮವಹಿಸುವುದು, ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಯಪಡಿಸಿದೆ.
8. ಸಾರ್ವಜನಿಕ ಸಂಪರ್ಕಾಧಿಕಾರಿಗಳು ಬಿಬಿಎಂಪಿ ರವರಿಗೆ ಕಳುಹಿಸುತ್ತಾ ಸದರಿ 'ಸಾರ್ವಜನಿಕ ಪ್ರಕಟಣೆ' ಯನ್ನು ನಿಯಮಾನುಸಾರ ಪ್ರಮುಖ ಕನ್ನಡ ಹಾಗೂ ಅಂಗ್ಲ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಸೂಚಿಸಿದೆ.
9. ಎಲ್ಲಾ ವಲಯದ ಆರೋಗ್ಯಾಧಿಕಾರಿಗಳು/ ಉಪ ಆರೋಗ್ಯಾಧಿಕಾರಿಗಳು/ ಆರೋಗ್ಯ ವೈದ್ಯಾಧಿಕಾರಿಗಳು ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ.
10. ಕಛೇರಿ ಕಡತಕ್ಕೆ.